# ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ

ನವನಗರ, ಹುಬ್ಬಳ್ಳಿ – 580025

ನ್ಯಾಕ 'ಎ' ಶ್ರೇಣಿ ಮಾನ್ಯತೆ

ದೂರವಾಣಿ ಸಂಖ್ಯೆ : 0836-2222392 ಜಾಲತಾಣ: www.kslu.karnataka.gov.in

ಫ್ಯಾಕ್ಸ್ :0836-2223392 ಇ-ಮೇಲ್:kslu.registrar@gmail.com


ಸಂಖ್ಯೆ: ಕರಾಕಾವಿ/ವಿದ್ಯಾಮಂಡಳ/ಸಂಯೋಜನೆ/2022-23/0639 ದಿನಾಂಕ: 01.07.2022 13

## ಸುತ್ತೋಲೆ

**ವಿಷಯ:** ಕ.ರಾ.ಕಾ.ವಿ.ಯ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು **"ಕಾನೂನು ಕನ್ನಡ"** ಅಥವಾ **"ಕನ್ನಡ ಕಲಿ"** ವಿಷಯಗಳಲ್ಲಿ ಆಯ್ಕೆ ಮಾಡುವ ಕುರಿತು.

**ಉಲ್ಲೇಖ:** ಮಾನ್ಯ ಕುಲಪತಿಗಳ ಅನುಮೋದನೆಯ ದಿನಾಂಕ: 11.07.2022.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು (ಪ್ರಭಾರ) ದಿನಾಂಕ: 21-06-2022 ರಂದು ವಿಶ್ವವಿದ್ಯಾಲಯದ ಸಭಾಂಗಣದಲ್ಲಿ ವಿಶ್ವವಿದ್ಯಾಲಯದ ಶಾಸನಬದ್ಧ ಅಧಿಕಾರಿಗಳೊಡನೆ ಆಡಳಿತಾತ್ಮಕ ಮತ್ತು ಶೈಕ್ಷಣಿಕ ವಿಷಯಗಳ ಬಗ್ಗೆ ಚರ್ಚಿಸಿದ್ದು, ಸಭೆಯ ನಡಾವಳಿಗಳ ಪ್ರಕಾರ ಕರಾಕಾವಿಯ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು **"ಕಾನೂನು ಕನ್ನಡ"** ಅಥವಾ **"ಕನ್ನಡ ಕಲಿ"** ವಿಷಯಗಳಲ್ಲಿ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ಗೊಂದಲವಿರುವ ಕಾರಣ ಹತ್ತನೇ ತರಗತಿಯಲ್ಲಿ ಕನ್ನಡವನ್ನು ಪ್ರಥಮ, ದ್ವಿತೀಯ ಅಥವಾ ತೃತೀಯ ಭಾಷೆಯಾಗಿ ಆಯ್ಕೆ ಮಾಡಿಕೊಂಡು ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು **"ಕಾನೂನು ಕನ್ನಡ"** ವಿಷಯವನ್ನು ಕಾನೂನು ಪದವಿಯಲ್ಲಿ ಕಡ್ಡಾಯವಾಗಿ ಆಯ್ಕೆ ಮಾಡಿಕೊಳ್ಳತಕ್ಕದ್ದು, ಇಲ್ಲವಾದಲ್ಲಿ **"ಕನ್ನಡ ಕಲಿ"** ವಿಷಯವನ್ನು ಆಯ್ಕೆ ಮಾಡಬೇಕೆಂದು ಪ್ರಸ್ತುತ ವಿಶ್ವವಿದ್ಯಾಲಯದ ನಿಯಮಾವಳಿಯಲ್ಲಿ ಇರುವುದರಿಂದ ಸದರಿ ವಿಷಯವನ್ನು ಈ ಪತ್ರದ ಮೂಲಕ ತಿಳಿಸಲಾಗಿದೆ.

ಕುಲಸಚಿವರು

ಗೆ,

ಎಲ್ಲ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳು,
ಕರಾಕಾವಿ, ನವನಗರ, ಹುಬ್ಬಳ್ಳಿ.

ಪ್ರತಿ:

1) ಕುಲಪತಿಗಳ ಆಪ್ತಕಾರ್ಯದರ್ಶಿಗಳು, ಕರಾಕಾವಿ, ಹುಬ್ಬಳ್ಳಿ.
2) ಉಪ ಕುಲಸಚಿವರು ವಿದ್ಯಾಮಂಡಳ ವಿಭಾಗ, ಕರಾಕಾವಿ, ಹುಬ್ಬಳ್ಳಿ
3) ಕಛೇರಿ ಪ್ರತಿ.